Date : 03.02.2026

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**–ಮುಂದುವರಿದ ಮುಖ್ಯ ವಿಚಾರಣೆ – 1 ನೇ ಎದುರುದಾರರ ಪರ ಶ್ರೀ ಡಿ.ಜಿ.ಪಿ. ರವರಿಂದ –**

ನಾನು ಹಾಲಿ ವಿಶೇಷ ಭೂಸ್ವಾಧೀನಾಧಿಕಾರಿ ಎಂದು 1 ನೇ ಎದುರುದಾರರ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿದಾರರು ನಮ್ಮ ವಿರುದ್ಧ ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಲು ಕೋರುತ್ತೇನೆ.

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎ.ವಿ.ವಿ. ವಕೀಲರಿಂದಃ**

1) ನಾನು ಈ ದಿನ ಅರ್ಜಿದಾರರು ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ 1 ನೇ ಎದುರುದಾರರ ಪರ ನಮ್ಮ ಕಛೇರಿಯಲ್ಲಿರುವ ದಾಖಲೆಗಳನ್ನು ಆಧರಿಸಿ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಅರ್ಜಿಯಲ್ಲಿ ಕಾಣಿಸಿದ ಸ್ವಾಧೀನ ಪಡಿಸಿಕೊಂಡ ಅರ್ಜಿದಾರರ ಮಾಲೀಕತ್ವದ ಬಗ್ಗನಾಡು ಗ್ರಾಮದ ಆಸ್ತಿಗಳಿಗೆ ಸಂಬಂಧಿಸಿದಂತೆ ಪರಿಹಾರವೆಂದು 1 ಗುಂಟೆಗೆ ರೂ. 6,798/– ರಂತೆ ಲೆಕ್ಕ ಮಾಡಿ ನಾವು ಅರ್ಜಿದಾರರಿಗೆ ಹಣ ಪಾವತಿಸಿರುತ್ತೇವೆ ಎಂದರೆ ಸರಿ. ಅರ್ಜಿಯಲ್ಲಿ ಕಾಣಿಸಿದ ಸ್ವಾಧೀನ ಪಡಿಸಿಕೊಂಡ ಜಮೀನಿಗೆ ಸಂಬಂಧಿಸಿದಂತೆ ಅದರ ಮಾಲೀಕರಿಗೆ ಪರಿಹಾರ ಎಷ್ಟು ಕೊಡಬೇಕೆಂದು ನೀವು ನಿರ್ಧರಿಸುವಾಗ, ಸ್ವಾಧೀನ ಪಡಿಸಿಕೊಂಡ ಆಸ್ತಿ ಇರುವ ಗ್ರಾಮದ ಇತರೆ ಆಸ್ತಿಗಳ 3 ವರ್ಷಗಳ ಹಿಂದೆ ನಡೆದಂತಹ ವ್ಯವಹಾರವನ್ನು ಸರಾಸರಿ ಎಂದು ಪರಿಗಣಿಸಿ ಅದರಲ್ಲಿ ನಮಗೆ ಬೇಕಾದಂತಹ ಒಂದು ವ್ಯವಹಾರವನ್ನು ತೆಗೆದುಕೊಂಡು ಅದಕ್ಕೆ ಅನುಗುಣವಾಗಿ ನೀವು ಪರಿಹಾರದ ಮೌಲ್ಯವನ್ನು ನಿರ್ಧರಿಸುವಿರೆಂದು ಸೂಚಿಸಲಾಗಿ, ಸೂಚನೆ ಸರಿಯಲ್ಲ, ಕಾಯ್ದೆಯಲ್ಲಿ ಉಲ್ಲೇಖಿಸಿದಂತೆ ಆ 3 ವರ್ಷಗಳ ವ್ಯವಹಾರದ ಹೆಚ್ಚಿನ ವ್ಯವಹಾರದ ಒಟ್ಟು ಮೌಲ್ಯದ ಶೇಕಡಾ 50 ನ್ನು ತೆಗೆದುಕೊಂಡು ನಾವು ಪರಿಹಾರ ನಿರ್ಧರಿಸುವೆವು ಎಂದು ಸಾಕ್ಷಿ ಹೇಳುತ್ತಾರೆ.

2) ನಿಪಿ–4 ಎಂದು ಗುರುತಿಸಿದ ದಾಖಲೆಯ ಪುಟ–8 ರಲ್ಲಿಯ ಕ್ರಮ ಸಂಖ್ಯೆ–20 ರಲ್ಲಿ ಕಾಣಿಸಿದ ವಿವರವನ್ನು ನೋಡಲಾಗಿ ಅದರಲ್ಲಿ ಕಾಣಿಸಿದ ಆಸ್ತಿಯ ಮೌಲ್ಯವು 1 ಗುಂಟೆಗೆ ರೂ.

20,417/– ರಂತೆ ನಿರ್ಧರಿಸಿ ಮಾರಾಟವಾಗಿರುವುದು ಕಂಡು ಬರುವುದೆಂದು ಸೂಚಿಸಲಾಗಿ, ಹೌದು, ಸದರಿ ವ್ಯವಹಾರವನ್ನು ಕೂಡ ನಾನು ಸಾಮಾನ್ಯ ಐತೀರ್ಪು ಹೊರಡಿಸುವಾಗ ಪರಿಗಣನೆಗೆ ತೆಗೆದುಕೊಂಡಿರುವೆನೆಂದು ಸಾಕ್ಷಿ ಹೇಳುತ್ತಾರೆ. ಸದರಿ ಮೇಲೆ ಹೇಳಿದ ಕ್ರಮ ಸಂಖ್ಯೆಯಲ್ಲಿಯ ವ್ಯವಹಾರವನ್ನು ಪರಿಗಣಿಸಿದಾಗ ಅರ್ಜಿಯಲ್ಲಿ ಕಾಣಿಸಿದ ಭೂಸ್ವಾಧೀನಪಡಿಸಿಕೊಂಡ ಆಸ್ತಿಗೆ ಕೂಡ ಒಂದು ಗುಂಟೆ ರೂ. 20,417/– ರಂತೆ ಪರಿಹಾರವನ್ನು ನೀವು ಅರ್ಜಿದಾರರಿಗೆ ಕೊಡಬೇಕಾಗಿದ್ದು, ಆದರೆ ನೀವು 1 ಗುಂಟೆಗೆ ರೂ. 6,798/– ರಂತೆ ಪರಿಹಾರ ನಿರ್ದರಿಸಿ ಅರ್ಜಿದಾರರಿಗೆ ಕೊಟ್ಟಿದ್ದು, ಅದು ಸೂಕ್ತ ಇರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿಯಲ್ಲಿ ಕಾಣಿಸಿದ ಭೂಸ್ವಾಧೀನ ಪಡಿಸಿಕೊಂಡ ಜಮೀನಿಗೆ ಪರಿಹಾರವೆಂದು ನಾವು ಪ್ರತೀ ಗುಂಟೆಗೆ ರೂ. 20,417/–ದಂತೆ ಲೆಕ್ಕ ಹಾಕಿ ಅರ್ಜಿದಾರರಿಗೆ ಪರಿಹಾರ ಕೊಡಲು ಬಾಧ್ಯರು ಎಂದರೆ ಸರಿಯಲ್ಲ.

3) ಅರ್ಜಿದಾರರು ಅರ್ಜಿಯಲ್ಲಿ ಕೋರಿದಂತೆ ಅವರ ಮಾಲೀಕತ್ವದ ಸ್ವಾಧೀನಪಡಿಸಿಕೊಂಡ ಜಮೀನಿಗೆ ನಾವು ಪರಿಹಾರ ಕೊಡಲು ಬಾಧ್ಯರಾಗಿದ್ದು, ಆದರೆ ಆ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುವೆನೆಂದರೆ ಸರಿಯಲ್ಲ.

ಮರು ವಿಚಾರಣೆ – ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.